ಮೈಸೂರು - ಶಿಕಾರಿಪುರ ರಸ್ತೆಯ ದುರಸ್ಥಿ

2318 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೈಸೂರು - ಶಿಕಾರಿಪುರ ರಸ್ತೆಯಲ್ಲಿ ಹಿರೇಕೆರೂರು ತಾಲ್ಲೂಕು ಹಾದಿಯಲ್ಲಿ ಕೆಲವು ಕಡೆ ವಾಹನಗಳು ಓಡಾಡದಂತಹ ಪರಿಸ್ಥಿತಿ ನಿರ್ಮಾಣ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಯಾವಾಗ ದುರಸ್ತಿ ಮಾಡಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

1) ಇತ್ತೀಚಿನ ಬಾರಿ ಮಳೆಯಿಂದ ಮಾಸೂರ ಶಿಕಾರಿಪುರ ರಸ್ತೆಯಲ್ಲಿ ಹಿರೇಕೆರೂರು ತಾಲ್ಲೂಕು ಹಾದಿಯಲ್ಲಿ ಹಲವು ಕಡೆ ತಗ್ಗು (ಪಾಟ್‌ಹೋಲ್) ಗಳು ಬಿದ್ದು ವಾಹನಗಳು ಸರಾಗವಾಗಿ ಓಡಾಡಲು ತೊಂದರೆ ಆದದ್ದು ಸರ್ಕಾರದ ಗಮನಕ್ಕೆ ಬಂದಿದೆ.

2) ಸಧ್ಯ ಮಳೆಗಾಲವಿದ್ದುದರಿಂದ ರಸ್ತೆಯಲ್ಲಿ ಬಿದ್ದಂತಹ ತಗ್ಗುಗಳನ್ನು ತಕ್ಷಣ ಖಡಿ ಮತ್ತು ಮೂರ್ರಂದಿಂದ ತುಂಬಲು ಕ್ರಮ ಕೈಕೊಳ್ಳಲಾಗುವುದು. ಮಳೆಗಾಲದ ನಂತರ ಈ ರಸ್ತೆಯನ್ನು ದುರಸ್ತಿಗೊಳಿಸಲಾಗುವುದು.

ಬದಾಮಿಯಲ್ಲಿ ಹಾಲು ಉತ್ಪಾದಕರ ಸಂಘ

2319 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬದಾಮಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬದಾಮಿ ತಾಲ್ಲೂಕಿನಲ್ಲಿ ಎಷ್ಟು ಹಾಲು ಉತ್ಪಾದಕರ ಸಂಘಗಳು ಇವೆ, (ಗ್ರಾಮಗಳ ವಿವರ ನೀಡುವುದು)?

ಆ) ಇವುಗಳಲ್ಲಿ ಲಾಭದಾಯಕ ಸಂಘಗಳೆಷ್ಟು?

ಇ) ಸಂಘಗಳು ನಷ್ಟಕ್ಕೆ ಒಳಗಾಗಲು ಕಾರಣವೇನು?

ಈ) ಇದನ್ನು ಸರಿಪಡಿಸಲು ಸರಕಾರ, ಹಾಗೂ ಒಕ್ಕೂಟಗಳು ಏನು ಕ್ರಮ ಕೈಗೊಳ್ಳುತ್ತಿವೆ

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು)

ಅ) 48

ಆ) ಗ್ರಾಮಗಳ ವಿವರ ಅನಬಂಧದಲ್ಲಿ ನೀಡಿದೆ.